Spl.C. 3/2020.

# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.

## ವಿಶೇಷ ಸತ್ರ ಮೊಕದ್ದಮೆ ಸಂಖ್ಯೆ 3/2020.

| | | | |
|---|---|---|---|
| ಹೆಸರು | : | ನಾಗಪ್ಪ ತಳಗೇರಿ | ಫ್ರಾಸಾ-17 |
| ತಂದೆಯ ಹೆಸರು | : | ಸಿದ್ದಪ್ಪ | ಚಾಸಾ-26 |
| ವಯಸ್ಸು | : | 41 ವರ್ಷ | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಶಿರೋಳ, ತಾಃ ಮುಧೋಳ | |

ದಿನಾಂಕಃ 26-06-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿತರು ಪರಿಚಯ. ಚಾಸಾ-1 ನನ್ನ ಚಿಕ್ಕಪ್ಪ. ಚಾಸಾ-2 ರಿಂದ 5, 16 ರಿಂದ 25 ನನ್ನ ಸಂಬಂಧಿಕರು. ಚಾಸಾ-27 ನನ್ನ ತಂಗಿ.

ಅಕ್ಟೋಬರ್-15 ರಂದು ನಾನು ಬಾಗಲಕೋಟೆ ನ್ಯಾಯಾಲಯಕ್ಕೆ ವಾಹನ ಬಿಡಿಸಿಕೊಳ್ಳಲು ಬಂದಿದ್ದೆ. ಅದರ ಕೇಸ ನಂಬರು ಗೊತ್ತಿಲ್ಲ. 7 ನೇ ತಾರೀಕಿಗೆ ಗಾಡಿ ಮೇಲೆ ಬರುವಾಗ ಬರಿ ಬಾಯಿ ಮಾತಿನ ಜಗಳವಾಗಿತ್ತು. ಮಾರನೇ ದಿನ ಯಲ್ಲಪ್ಪ ತಳಗೇರಿಯವರಿಗೆ ತಲ್ವಾರಿನಿಂದ ತಲೆಗೆ ಹೊಡೆದರು. ಅಶೋಕ ತಳಗೇರಿ ಇವರ ಮನೆಯಲ್ಲಿ ಗಲಾಟೆ ಮಾಡಿದರು. ನಂತರ ನನ್ನ ತೋಟಕ್ಕೆ ಬಂದು ನಾಗ್ಯಾ ಎಲ್ಲಿ ಹೋಗಿದ್ದಾನೆ, ಹೊಲೆಯ ಸೂಳೆ ಮಗ, ಯಲ್ಯಾನ ಮುಗಿಸಿ ಬಂದಿದ್ದೇವೆ ನಾಗ್ಯಾ ಎಲ್ಲಿ ಹೋಗಿದ್ದಾನೆ ಅಂತಾ ಕೇಳಿದರು. ನಂತರ ಕಲ್ಲುಗಳನ್ನು ಒಗೆದು ಕಾರ ಗಾಡಿ ಜಖಂ ಮಾಡಿದರು. ಬುಲೆಟ್ ಗಾಡಿಯನ್ನು ಕಡಿದಿದ್ದಾರೆ, ಟ್ಯಾಂಕನಲ್ಲಿರುವ ಎಣ್ಣೆ ಸೋರಿ ಹೋಗಿದೆ, ಟ್ರ್ಯಾಕ್ಟರಗೆ ಹೊಡೆದಿದ್ದಾರೆ, ಹೆಣ್ಣು ಮಕ್ಕಳಾದ ಮಲ್ಲವ್ವನಿಗೆ ಸೀರೆ ಹಿಡಿದು ಜಗ್ಗಾಡಿದ್ದಾರೆ, ನನ್ನ ತಾಯಿಗೆ ಮಲ್ಲಪ್ಪ ಹುದ್ದಾರ ಕಲ್ಲಿನಿಂದ ಕಾಲಿಗೆ ಹೊಡೆದಿದ್ದಾನೆ.

ಅದಾದ ನಂತರ ಕೇಸು ಮಾಡಿದ್ದೇವೆ. ನಂತರ ಆರೋಪಿತರು ಜಾಮೀನಿನ ಮೇಲೆ ಬಂದು ನಮ್ಮನ್ನು ಫಾಲೋ ಮಾಡುತ್ತಿದ್ದರು.

ಆರೋಪಿತರು ಫಾಲೋ ಮಾಡುತ್ತಿದ್ದಾರೆ ಅಂತಾ ಬೆಂಗಳೂರಿನ ಸೋಷಿಯಲ್ ವೆಲ್ ಫೇರನವರಿಗೆ ಹಾಗೂ ಬಾಗಲಕೋಟೆ ಎಸ್.ಪಿ ರವರಿಗೆ ಆರೋಪಿತರು ಫಾಲೋ ಮಾಡಿ ಮರ್ಡರ ಮಾಡುತ್ತಾರೆ ಅಂತಾ ಮನವಿ ನೀಡಿದ್ದೇನೆ.

ಘಟನೆಯಾದ ದಿನ ನಾನು ಬಾಗಲೋಟೆ ಕೋರ್ಟಗೆ ಗಾಡಿ ಬಿಡಿಸಿಕೊಳ್ಳಲು ಬಂದಿದ್ದೆ. ನಂತರ ಮಹಾಂತೇಶ 3.30 ಗಂಟೆಗೆ ಪೋನ ಮಾಡಿ ವಿಠ್ಠಲನ ಕೊಲೆಯಾಗಿದೆ ಎಲ್ಲಿದ್ದೀರಿ ಅಂತಾ ಕೇಳಿದ. ನಾನು ಕೋರ್ಟನಲ್ಲಿದ್ದೇನೆ ಅಂತಾ ಹೇಳಿದೆ. ಹಾಗೂ ಮಲ್ಲಪ್ಪ ಸಿದ್ದಪ್ಪ ತಳಗೇರಿ ಇವನ ಕೊಲೆಯಾಗಿದೆ ಅಂತಾ ಹೇಳಿದ. ನಂತರ ನಾನು 6.00 ಗಂಟೆಗೆ ಘಟನಾ ಸ್ಥಳಕ್ಕೆ ಹೋಗಿದ್ದೆ ಅಲ್ಲಿ ಸಾಕಷ್ಟು ಜನ ಸೇರಿದ್ದರು.

ನಾನು ನೋಡಲಾಗಿ ವಿಠ್ಠಲನನ್ನು ಕಡಿದು ಬೇಲಿಯಲ್ಲಿ ಹಾಕಿದ್ದರು. ವಿಠ್ಠಲನ ಬಲಗೈ ಕಡಿದಿದ್ದರು ಮತ್ತು ತಲೆ ಮೇಲೆ ಕಡಿದಿದ್ದರು. ಕುತ್ತಿಗೆ ಬಲಭಾಗದಲ್ಲಿ ಸ್ವಲ್ಪ ಉಳಿದಿತ್ತು. ಮಲೆಪ್ಪನನ್ನು ಕಡಿದು ಕಲ್ಲೋಳಿ ರಸ್ತೆಯಲ್ಲಿ ಹಾಕಿದ್ದರು. ಅವನ ಕುತ್ತಿಗೆಗೆ ಗಾಯವಾಗಿತ್ತು. ಸ್ಥಳದಲ್ಲಿ ಕಾರ ಗಾಡಿ ನಂಬರು ಪ್ಲೇಟ್ ಇತ್ತು. ಹೋಂಡಾ ಶೈನ್ ಗಾಡಿ ಡೋಮ್ ಸ್ಥಳದಲ್ಲಿ ಬಿದ್ದಿದ್ದವು. ನಿಪಿ-40 ರಿಂದ 45 ಪೋಟೋಗಳನ್ನು ನೋಡಿ ಗುರುತಿಸಿದ್ದೇನೆ. ಮುಮಾ-1 ರಿಂದ 3, 23 ನೋಡಿ ಗುರುತಿಸಿದ್ದೇನೆ. ನಾನು ವಿಚಾರಣೆ ಮಾಡಿದಾಗ 13 ಜನರು ಕಾರು ಮತ್ತು ಬುಲೆಟ್ ಗಾಡಿ ಮೇಲೆ ಬಂದು ಕೊಲೆ ಮಾಡಿದ್ದಾರೆ ಅಂತಾ ಕಾಂಚನಾ ಮತ್ತು ರೇಖಾ ಹೇಳಿದ್ದಾರೆ. ಮಹೇಶ ನಾಗರೆಡ್ಡಿ, ಮಲ್ಲಪ್ಪ ಹುದ್ದಾರ, ಲಕ್ಷ್ಮಣ ಜಕಾಣಿ, ಕಿರಣ ನಾಗರೆಡ್ಡಿ, ಸಿದ್ದು ನಾಗರೆಡ್ಡಿ, ಶಂಕ್ರಪ್ಪ ಗುಡದಿನ್ನಿ ಉಳಿದವರ ಹೆಸರು ನೆನಪಿಲ್ಲ.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಚ್ ವಕೀಲರಿಂದ.**

ದಿನಾಂಕಃ 30-11-2019 ರಂದು ಪೋಲಿಸರು ನನ್ನ ಹೇಳಿಕೆ ಪಡೆದಿದ್ದಾರೆ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸಾಕ್ಷಿ ನಾನು ಹೇಳಿದ್ದೇನೆ ಆದರೆ ಪೋಲಿಸರು ಬರೆದುಕೊಂಡಿಲ್ಲ ಎನ್ನುತ್ತಾರೆ.

ನಾನು ವಿಚಾರಣೆ ಮಾಡಿದಾಗ 13 ಜನರು ಕಾರು ಮತ್ತು ಬುಲೆಟ್ ಗಾಡಿ ಮೇಲೆ ಬಂದು ಕೊಲೆ ಮಾಡಿದ್ದಾರೆ ಅಂತಾ ಕಾಂಚನಾ ಮತ್ತು ರೇಖಾ ಹೇಳಿದ್ದಾರೆ ಅವರ ಹೆಸರು ಮಹೇಶ ನಾಗರೆಡ್ಡಿ, ಮಲ್ಲಪ್ಪ ಹುದ್ದಾರ, ಲಕ್ಷ್ಮಣ ಜಕಾಣಿ, ಕಿರಣ ನಾಗರೆಡ್ಡಿ, ಸಿದ್ದು ನಾಗರೆಡ್ಡಿ, ಶಂಕ್ರಪ್ಪ ಗುಡದಿನ್ನಿ ಉಳಿದವರ ಹೆಸರು ನೆನಪಿಲ್ಲ ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸಾಕ್ಷಿ ನಾನು ಹೇಳಿದ್ದೇನೆ ಆದರೆ ಪೋಲಿಸರು ಬರೆದುಕೊಂಡಿಲ್ಲ ಎನ್ನುತ್ತಾರೆ.

ನಾನು ಬಾಗಲಕೋಟೆಗೆ ಕಾರನಲ್ಲಿ ಬಂದಿದ್ದೆ. ನನಗೆ 3.30 ಗಂಟೆಗೆ ಸುದ್ದಿ ಬಂತು. ನಾನು ಸ್ಥಳಕ್ಕೆ 6.00 ರಿಂದ 6.30 ಗಂಟೆಗೆ ಹೋಗಿದ್ದೇನೆ. ನಾನು ಸ್ಥಳಕ್ಕೆ ಹೋದಾಗ ರೇಖಾ ಮತ್ತು ಕಾಂಚನಾ ಸ್ಥಳದಲ್ಲಿದ್ದರು. ಆ ದಿನ ಪೋಲಿಸರಿಗೆ ಹೇಳಿಕೆ ನೀಡಿಲ್ಲ.

ಅಕ್ಟೋಬರ್-15 ರಂದು ನಾನು ಬಾಗಲಕೋಟೆ ನ್ಯಾಯಾಲಯಕ್ಕೆ ವಾಹನ ಬಿಡಿಸಿಕೊಳ್ಳಲು ಬಂದಿದ್ದೆ. ಅದರ ಕೇಸ ನಂಬರು ಗೊತ್ತಿಲ್ಲ, 7 ನೇ ತಾರೀಕಿಗೆ ಗಾಡಿ ಮೇಲೆ ಬರುವಾಗ ಬರಿ ಬಾಯಿ ಮಾತಿನ ಜಗಳವಾಗಿತ್ತು, ಮಾರನೇ ದಿನ ಯಲ್ಲಪ್ಪ ತಳಗೇರಿಯವರಿಗೆ ತಲ್ವಾರಿನಿಂದ ತಲೆಗೆ ಹೊಡೆದರು, ಅಶೋಕ ತಳಗೇರಿ ಇವರ ಮನೆಯಲ್ಲಿ ಗಲಾಟೆ ಮಾಡಿದರು, ನಂತರ ನನ್ನ ತೋಟಕ್ಕೆ ಬಂದು ನಾಗ್ಯಾ ಎಲ್ಲಿ ಹೋಗಿದ್ದಾನೆ, ಹೊಲೆಯ ಸೂಳೆ ಮಗ, ಯಲ್ಯಾನ ಮುಗಿಸಿ ಬಂದಿದ್ದೇವೆ ನಾಗ್ಯಾ ಎಲ್ಲಿ ಹೋಗಿದ್ದಾನೆ ಅಂತಾ ಕೇಳಿದರು, ನಂತರ ಕಲ್ಲುಗಳನ್ನು ಒಗೆದು ಕಾರ ಗಾಡಿ ಜಖಂ ಮಾಡಿದರು. ಬುಲೆಟ್ ಗಾಡಿಯನ್ನು ಕಡಿದಿದ್ದಾರೆ, ಟ್ಯಾಂಕನಲ್ಲಿರುವ ಎಣ್ಣೆ ಸೋರಿ ಹೋಗಿದೆ, ಟ್ರ್ಯಾಕ್ಟರಗೆ ಹೊಡೆದಿದ್ದಾರೆ, ಹೆಣ್ಣು ಮಕ್ಕಳಾದ ಮಲ್ಲವ್ವನಿಗೆ ಸೀರೆ ಹಿಡಿದು ಜಗ್ಗಾಡಿದ್ದಾರೆ, ನನ್ನ ತಾಯಿಗೆ ಮಲ್ಲಪ್ಪ ಹುದ್ದಾರ ಕಲ್ಲಿನಿಂದ ಕಾಲಿಗೆ ಹೊಡೆದಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಅದಾದ ನಂತರ ಕೇಸು ಮಾಡಿದ್ದೇವ, ನಂತರ ಆರೋಪಿತರು ಜಾಮೀನಿನ ಮೇಲೆ ಬಂದು ನಮ್ಮನ್ನು ಫಾಲೋ ಮಾಡುತ್ತಿದ್ದರು,

ಆರೋಪಿತರು ಫಾಲೋ ಮಾಡುತ್ತಿದ್ದಾರೆ ಅಂತಾ ಬೆಂಗಳೂರಿನ ಸೋಷಿಯಲ್ ವೆಲ್ ಫೇರನವರಿಗೆ ಹಾಗೂ ಬಾಗಲಕೋಟೆ ಎಸ್.ಪಿ ರವರಿಗೆ ಆರೋಪಿತರು ಫಾಲೋ ಮಾಡಿ ಮರ್ಡರ ಮಾಡುತ್ತಾರೆ ಅಂತಾ ಮನವಿ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಘಟನೆಯಾದ ದಿನ ನಾನು ಬಾಗಲೋಟೆ ಕೋರ್ಟಗೆ ಗಾಡಿ ಬಿಡಿಸಿಕೊಳ್ಳಲು ಬಂದಿದ್ದೆ. ನಂತರ ಮಹಾಂತೇಶ 3.30 ಗಂಟೆಗೆ ಪೋನ ಮಾಡಿ ವಿಠ್ಠಲನ ಕೊಲೆಯಾಗಿದೆ ಎಲ್ಲಿದ್ದೀರಿ ಅಂತಾ ಕೇಳಿದ, ನಾನು ಕೋರ್ಟನಲ್ಲಿದ್ದೇನೆ ಅಂತಾ ಹೇಳಿದೆ. ಹಾಗೂ ಮಲ್ಲಪ್ಪ ಸಿದ್ದಪ್ಪ ತಳಗೇರಿ ಇವನ ಕೊಲೆಯಾಗಿದೆ ಅಂತಾ ಹೇಳಿದ, ನಂತರ ನಾನು 6.00 ಗಂಟೆಗೆ ಘಟನಾ ಸ್ಥಳಕ್ಕೆ ಹೋಗಿದ್ದೆ ಅಲ್ಲಿ ಸಾಕಷ್ಟು ಜನ ಸೇರಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಾನು ನೋಡಲಾಗಿ ವಿಠ್ಠಲನನ್ನು ಕಡಿದು ಬೇಲಿಯಲ್ಲಿ ಹಾಕಿದ್ದರು, ವಿಠ್ಠಲನ ಬಲಗೈ ಕಡಿದಿದ್ದರು ಮತ್ತು ತಲೆ ಮೇಲೆ ಕಡಿದಿದ್ದರು. ಕುತ್ತಿಗೆ ಬಲಭಾಗದಲ್ಲಿ ಸ್ವಲ್ಪ ಉಳಿದಿತ್ತು, ಮಲೆಪ್ಪನನ್ನು ಕಡಿದು ಕಲ್ಲೋಳಿ ರಸ್ತೆಯಲ್ಲಿ ಹಾಕಿದ್ದರು, ಅವನ ಕುತ್ತಿಗೆಗೆ ಗಾಯವಾಗಿತ್ತು, ಸ್ಥಳದಲ್ಲಿ ಕಾರ ಗಾಡಿ ನಂಬರು ಪ್ಲೇಟ್ ಇತ್ತು. ಹೋಂಡಾ ಶೈನ್ ಗಾಡಿ ಡೋಮ್ ಸ್ಥಳದಲ್ಲಿ ಬಿದ್ದಿದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ವಿಠ್ಠಲ ಮತ್ತು ಮಲೆಪ್ಪ ಮೋಟರ ಸೈಕಲ ಮೇಲೆ ಹೋಗುವಾಗ ಸ್ಕಿಡ ಆಗಿ ಬಿದ್ದು ಅಪಘಾತ ಮಾಡಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ಅವರು ಅಪಘಾತದಲ್ಲಿ ಮೃತರಾದರೂ ಸಹ ಆರೋಪಿತರ ಮೇಲೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

26-06-2024.
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.

Spl.C. 3/2020.

# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.

## ವಿಶೇಷ ಸತ್ರ ಮೊಕದ್ದಮೆ ಸಂಖ್ಯೆ 3/2020.

| | | | |
|---|---|---|---|
| ಹೆಸರು | : | ಲಕ್ಷ್ಮಣ ನಬಾಬ | ಫ್ರಾಸಾ-16 |
| ತಂದೆಯ ಹೆಸರು | : | ಸತ್ಯಪ್ಪ | ಚಾಸಾ-28 |
| ವಯಸ್ಸು | : | 41 ವರ್ಷ | |
| ಉದ್ಯೋಗ | : | ವಾಟರಮನ್ | |
| ವಾಸಸ್ಥಳ | : | ಶಿರೋಳ, ತಾಃ ಮುಧೋಳ | |

ದಿನಾಂಕಃ 26-06-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿತರು ಪರಿಚಯ. ನಾನು ಹಿಂದೂ ಕುರುಬ ಜಾತಿಯವನು. ಚಾಸಾ-1,22,25,26 ಪರಿಚಯ.

ಘಟನೆ ದಿನ ನಾನು ಮುಧೋಳ ಸಿ.ಪಿ.ಐ ಕಚೇರಿಯಲ್ಲಿದ್ದೆ. ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ. ದಿನಾಂಕ ನೆನಪಿಲ್ಲ. ಪೋಲಿಸರ ಮುಂದೆ ಏನು ಹೇಳಿದ್ದೇನೆ ನೆನಪಿಲ್ಲ.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.**

ಆ ದಿನ ನಾನು ಸಿ.ಪಿ.ಐ ಕಚೇರಿಗೆ ಹೋದಾಗ 15 ನೇ ತಾರೀಕಿನಂದು ಕೊಲೆಯಾದ ವಿಚಾರದಲ್ಲಿ ಸಾಕ್ಷಿ ಹೇಳಲು ಬಂದಿದ್ದೇನೆ ಅಂತಾ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಮಹಾಂತೇಶ ತಳಗೇರಿ ಇವರ ಕಡೆಯಿಂದ 2 ಲಕ್ಷ ರೂಪಾಯಿ ಹಣವನ್ನು ಕೈಗಡ ತೆಗೆದುಕೊಂಡಿದ್ದು ಆ ಕಾಗದಪತ್ರಕ್ಕೆ ಸಹಿ ಮಾಡಿದ್ದು ಆ ವೇಳೆ ನಾನು ಮಧ್ಯಸ್ಥಿಕೆ ಮಾಡಿದ ವಿಷಯಕ್ಕೆ ನಾನು ಠಾಣೆಗೆ ಹೋಗಿದ್ದೆ ಎಂದು ಹೇಳಿದ್ದೇನೆ ಎನ್ನುವುದು ನಿಜ. ನನಗೆ ಠಾಣೆಗೆ ಬರುವಂತೆ ಮಹಾಂತೇಶ ಕರೆದಿದ್ದ. ನನ್ನೊಂದಿಗೆ ಯಲ್ಲಪ್ಪ ತಳಗೇರಿ ಅವನ ತಾಯಿ ಸತ್ಯವ್ವ, ಮಹಾಂತೇಶ ತಳಗೇರಿ,

ಅಶೋಕ ತಳಗೇರಿ ಈತನ ಮಗ ಹಾಗೂ ಇನ್ನೊಬ್ಬ ಸೇರಿ ಹೋಗಿದ್ದೆವು ಎನ್ನುವುದು ನಿಜ. ದಿನಾಂಕಃ 15-10-2019 ರಂದು ಸಾಯಂಕಾಲ 4.15 ಗಂಟೆಗೆ ಮಹಾಂತೇಶ ಪೋನ ಮಾಡಿ ಮಹೇಶ ನಾಗರೆಡ್ಡಿ, ಗಿರಿಮಲ್ಲಯ್ಯ ಗಣಾಚಾರಿ ಹಾಗೂ ಇನ್ನೂ 7-8 ಜನರು ಠಾಣೆಗೆ ಬರುವಂತೆ ಹೇಳಿದಾಗ ನಾನು ಪೈಪಲೈನ ರಿಪೇರಿ ಮಾಡುತ್ತಿದ್ದು 10 ನಿಮಿಷದಲ್ಲಿ ಬರುತ್ತೇನೆ ಅಂತಾ ಹೇಳಿ ನಂತರ ಮುಧೋಳಕ್ಕೆ ಹೋಗುವಾಗ ಮಲ್ಲಾಪುರ ಕ್ರಾಸ ಬಳಿ ಯಲ್ಲಪ್ಪ ಮತ್ತು ಮಹಾಂತೇಶ ಇವರೆಲ್ಲರೂ ನನಗೆ ಮೋಟರ ಸೈಕಲ ಮೇಲೆ ಎದುರಾಗಿದ್ದು ವಿಠ್ಠಲ ಇವನಿಗೆ ಅಪಘಾತವಾಗಿದೆ ಠಾಣೆಗೆ ಹೋಗುವುದು ಬೇಡ ಮರಳಿ ಬಾ ಎಂದಾಗ ನಾನು ನನ್ನ ಕೆಲಸಕ್ಕೆ ಶಿರೋಳ ಕ್ರಾಸ ಕಡೆಗೆ ಹೋಗಿ ಕೆಲಸ ಮಾಡುವಾಗ ಸಂಜೆ 5.30 ಗಂಟೆಗೆ ವಿಠ್ಠಲ ತಳಗೇರಿ ಇವರಿಗೆ ಕೊಲೆಯಾಗಿರುವ ವಿಷಯ ಓಣಿಯ ಜನರಿಂದ ಗೊತ್ತಾಗಿ ಸ್ಥಳಕ್ಕೆ ಹೋಗಿ ನೋಡಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ಕೊಲೆಯನ್ನು ಆ ದಿವಸ ಯಾರು ಮಾಡಿದ್ದಾರೆ ಎಂದು ಗೊತ್ತಾಗಿಲ್ಲ ಹಾಗೂ 2 ದಿನದ ಮೇಲೆ ಮಲ್ಲಪ್ಪ ಹುದ್ದಾರ, ಶಿವಪ್ಪ ಮುಚ್ಚಂಡಿ ಹಾಗೂ ಕಬ್ಬು ಕಡಿಯುವ ಗ್ಯಾಂಗನವರಾದ ಶಂಕ್ರಪ್ಪ ಗುಡದಿನ್ನಿ ಇವರಿಗೆ ಅರೆಸ್ಟ ಮಾಡಿರುತ್ತಾರೆ ಅಂತಾ ಕೇಳಿ ಗೊತ್ತಾಗಿದೆ ಅಂತಾ ನಿಪಿ-46 ರಂತೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ-3 ಪೋಟೋದಲ್ಲಿ ನಾನು ಇದ್ದೇನೆ ಎನ್ನುವುದು ನಿಜ. 5.30 ಕ್ಕೆ ನಾನು ಘಟನಾ ಸ್ಥಳಕ್ಕೆ ಹೋಗಿದ್ದೇನೆ ಎನ್ನುವುದು ಸರಿಯಲ್ಲ. ಕೆಲಸ ಮುಗಿಸಿಕೊಂಡು ಹೋಗಿದ್ದೇನೆ. ನಿಪಿ-5 ಪೋಟೋ ನೋಡಿ ಗುರುತಿಸಿದ್ದೇನೆ. ನಿಪಿ-6,7 ಪೋಟೋಗಳನ್ನು ನೋಡಿ ಗುರುತಿಸುವುದಿಲ್ಲ. ನಿಪಿ-8 ಪೋಟೋ ನೋಡಿ ಗುರುತಿಸಿದ್ದೇನೆ. ನಾನು ಘಟನಾ ಸ್ಥಳಕ್ಕೆ ಹೋದಾಗ ಕತ್ತಲಾಗಿತ್ತು, ಏನೂ ಕಾಣಿಸಲಿಲ್ಲ ಹಾಗೂ ನಾನು ಏನೂ ನೋಡಿಲ್ಲ. ಆರೋಪಿತರು ಹಾಗೂ ನಾನು ಒಂದೇ ಜಾತಿಯವರಾಗಿರುವುದರಿಂದ ಅವರ ಪರವಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು)

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

26-06-2024.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.